ST ALOYSIUS

(DEEMED TO BE UNIVERSITY)

ESTD : 1880

MANGALURU, KARNATAKA 575003 - INDIA

# NEWS CLIPPINGS

## 01-11-2025 TO 30-11-2025

Varthabharathi 02-11-2025

### ಮಂಗಳೂರು ವಿವಿ: ಸಂಶೋಧನಾ ಕೌಶಲ್ಯಗಳ ಕುರಿತ ಕಾರ್ಯಾಗಾರ




ಕೊಣಾಜೆ, ನ.1: ಮಂಗಳೂರು ವಿವಿಯ ವಾಣಿಜ್ಯ ವಿಭಾಗದ ವತಿಯಿಂದ ಅಂತಿಮ ವಿಭಾಗದ ವಿದ್ಯಾರ್ಥಿಗಳಿಗೆ ಸಂಶೋಧನಾ ಕೌಶಲ್ಯಗಳ ಕುರಿತು ಒಂದು ದಿನದ ಕಾರ್ಯಾಗಾರ ಇತ್ತೀಚೆಗೆ ನಡೆಯಿತು.

ಸಂತ ಅಲೋಷಿಯಸ್ ಕಾಲೇಜಿನ ಪ್ರಾಧ್ಯಾಪಕ ಡಾ.ಪಿ.ವಿ.ಸುಮಿತಾ ಆಚಾರ್ ಸಂಪನ್ಮೂಲ ವ್ಯಕ್ತಿಯಾಗಿ ಮಾಹಿತಿ ನೀಡಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ.ಪ್ರೀತಿ ಕೀರ್ತಿ ಡಿಸೋಜ ಅಧ್ಯಕ್ಷತೆ ವಹಿಸಿದ್ದರು.

ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಡಾ.ದಿನಕರ ಕೆಂಜೂರು, ಡಾ.ರಮ್ಯಾ ಕೆ.ಆರ್., ವೈಶಾಲಿ ಕೆ. ಮತ್ತು ಸಿ.ಲಹರಿ ಹಾಜರಿದ್ದರು.

ಮೋಕ್ಷಿತಾ ಎಂ. ತಂಡದವರು ಪ್ರಾರ್ಥಿಸಿದರು. ಪಲ್ಲವಿ ಜೆ. ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ರೇಷ್ಮಾ ಎ. ವಂದಿಸಿದರು.

*Udayavani 02-11-2025*

# ಅಲೋಶಿಯಸ್ ವಿ.ವಿ.ಯಲ್ಲಿ ವಿಚಾರ ಗೋಷ್ಠಿ



**ಮಹಾನಗರ, ನ. 1:** ಅಲೋಶಿಯಸ್ ವಿಶ್ವವಿದ್ಯಾನಿಲಯದಲ್ಲಿ ಗಣಿತ ಮತ್ತು ಸಾಮಾಜಿಕ ನ್ಯಾಯದ ಕುರಿತು ವಿಚಾರ ಗೋಷ್ಠಿ ವಿವಿ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ನಡೆಯಿತು. ಅಮೆರಿಕದ ಫೋರ್ಡ್‌ಹ್ಯಾಮ್ ವಿಶ್ವವಿದ್ಯಾಲಯದ ಗಣಿತಶಾಸ್ತ್ರದ ಪ್ರಾಧ್ಯಾಪಿಕೆ ಡಾ| ಮೌರಾ ಬಿ. ಮಾಸ್ಟ್ ಮುಖ್ಯ ಅತಿಥಿಯಾಗಿ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ಅಲೋಶಿಯಸ್ ವಿವಿಯ ಪ್ರೊ-ವೈಸ್-ಚಾನ್ಸೆಲರ್ ವಂ| ಡಾ| ಮೆಲ್ವಿನ್ ಡಿ.ಕುನ್ಹಾ ಅಧ್ಯಕ್ಷತೆ ವಹಿಸಿದ್ದರು. ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರೆತ್ ಅತಿಥಿಯಾಗಿ ಭಾಗವಹಿಸಿದ್ದರು. ಸ್ಕೂಲ್ ಆಫ್ ಇಂಜಿನಿಯರಿಂಗ್ ಡೀನ್ ಡಾ| ಎಸ್. ರೂಬನ್ ಮತ್ತು ಸ್ಕೂಲ್ ಆಫ್ ಲಾ ಡೀನ್ ಡಾ| ಉದಯಕೃಷ್ಣ ಉಪಸ್ಥಿತರಿದ್ದರು.

ಎಸ್.ಒ.ಇ. ಸಹಾಯಕ ಡೀನ್ ಗ್ಲೆಸ್ಸನ್ ಟೋನಿ ನಿರೂಪಿಸಿದರು. ಡಾ| ಎಸ್. ರೂಬನ್ ಸ್ವಾಗತಿಸಿದರು. ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್‌ನ ರಾಯನ್ ವಂದಿಸಿದರು. ಉದ್ಘಾಟನ ಸಮಾರಂಭದ ಬಳಿಕ ವಿವಿಧ ಅಧಿವೇಶನಗಳು ನಡೆದವು.

*Udayavani 06-11-2025*

## 'ಯೆನ್ ಕೆಮಿಸ್ಟ್ ಫೋರಂ' ಉದ್ಘಾಟನೆ

# ಪ್ರತಿಯೊಂದು ಕ್ಷಣದ ಸದುಪಯೋಗ ಅಗತ್ಯ



**ಮಹಾನಗರ, ನ. 5:** ವಿದ್ಯಾರ್ಥಿಗಳು ಗರುಡದಂತೆ ಎತ್ತರಕ್ಕೆ ಹಾರಬೇಕು. ಅದಕ್ಕಾಗಿ ಮೊದಲು ನಿಮ್ಮ ಮೇಲೆ ನಂಬಿಕೆ ಇರಬೇಕು. ಪ್ರತಿಯೊಂದು ಪ್ರಸ್ತುತ ಕ್ಷಣವನ್ನು ಸದುಪಯೋಗಪಡಿಸಿಕೊಂಡರೆ ಯಶಸ್ಸು ಖಚಿತ ಎಂದು ಸಂತ ಅಲೋಶಿಯಸ್ ವಿವಿಯ ಅಸೋಸಿಯೇಟ್ ಡೀನ್ ಡಾ| ಗೀತಾ ಮೇಬಲ್ ಪಿಂಟೋ ಹೇಳಿದರು.

ಯೇನಪೊಯ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್, ಸೈನ್ಸ್, ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ರಸಾಯನಶಾಸ್ತ್ರ ವಿಭಾಗದ ವತಿಯಿಂದ 'ಯೆನ್ ಕೆಮಿಸ್ಟ್ ಫೋರಂ' ಉದ್ಘಾಟನೆ ಮತ್ತು ಅತಿಥಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. 'ಸಸ್ಟೈನೇಬಲ್ ಕೆಮೆಸ್ಟ್ರಿ ಆ್ಯಂಡ್ ಸ್ಟಾರ್ಟರ್ ಫಾರ್ಮುಲೇಶನ್' ಎಂಬ ವಿಷಯದ ಬಗ್ಗೆ ಅವರು ಮಾತನಾಡಿದರು.

ನೈಸರ್ಗಿಕ ಕೃತಕ ಸೌಂದರ್ಯ ಉತ್ಪನ್ನಗಳ ತಯಾರಿಕೆ, ಅವುಗಳ ದೈನಂದಿನ ಉಪಯೋಗಗಳು, ಚರ್ಮದ ಬಣ್ಣ ಮತ್ತು ಪಿಎಚ್ ಮಟ್ಟಕ್ಕೆ ಅನುಗುಣವಾಗಿ ಸೌಂದರ್ಯ ಉತ್ಪನ್ನಗಳ ಪರಿಣಾಮಗಳ ಕುರಿತು ವಿವರಿಸಿದರು.

ಕಾರ್ಯಕ್ರಮ ಸಂಯೋಜಕರಾದ ಶೈಲಾಕ್ಷಿ ಸ್ವಾಗತಿಸಿದರು. ಪ್ರಿಯಾ ಮುಖ್ಯ ಅತಿಥಿಯ ಪರಿಚಯ ಮಾಡಿದರು. ರಾಸಾಯನಿಕ ಪ್ರಕ್ರಿಯೆಯ ಮೂಲಕ ಅಗ್ನಿ ಉಂಟುಮಾಡುವ ವಿಶಿಷ್ಟ ವಿಧಾನದಲ್ಲಿ ದೀಪ ಪ್ರಜ್ವಲನೆ ನೆರವೇರಿಸಲಾಯಿತು.

ಉಪಪ್ರಾಚಾರ್ಯ ನಾರಾಯಣ ಸುಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಸಾಯನಶಾಸ್ತ್ರವು ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರಗಳೊಂದಿಗೆ ಹೇಗೆ ಪರಸ್ಪರ ಸಂಬಂಧ ಹೊಂದಿದೆ ಹಾಗೂ ದೈನಂದಿನ ಜೀವನದಲ್ಲಿ ರಸಾಯನಶಾಸ್ತ್ರದ ಮಹತ್ವದ ಕುರಿತು ಮಾತನಾಡಿದರು.

ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ| ಶರತ್ ಕುಮಾರ್ ಉಪಸ್ಥಿತರಿದ್ದರು. ಅಭಿಜಿತ್ ವಂದಿಸಿದರು.

Deccan Herald 07-11-2025

# 'AI not an alternative to human intelligence'

MANGALURU, DHNS: Artificial Intelligence (AI) is a tool and not an alternative to human intelligence, said Dr Ruban S, Dean, School of Engineering, St Aloysius Deemed-to-be-University.

He was addressing the inaugural ceremony of a national conference on 'Tech to talk: The Role of Modern Technology in Speech and Hearing Sciences' organised by the Father Muller College at the Decennial Memorial Hall at the Knowledge Centre on Thursday.

He said that at a time when the availability and accessibility of technological tools were ample, one had to understand that human creativity had no limits. "AI has to be applied for better use of mankind and not the other way round."

There is no alternative to knowledge that books provide and students have to cultivate the habit of reading books. Students have to use their intelligence to carry out creative collaborations directed towards public good. Take the first step and be determined to carry out the dreams, he said.

Father Muller Charitable Institutions Director Fr Faustine Lucas Lobo said, "Today's technology is market driven and one has to be careful while investing their time and money in such technology."

Udayavani 12-11-2025

# ಭಾಲಾವಲೀಕಾರ್ ಸಾರಸ್ವತ್ ಪುಸ್ತಕ ಬಿಡುಗಡೆ

**ಮಹಾನಗರ, ನ.11:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸಾರ್ವಜನಿಕ ಸಂಪರ್ಕಾಧಿಕಾರಿ ಚಂದ್ರಕಲಾ ನಾಯಕ್ ಅವರು ತಮ್ಮ ಮಾತೃಭಾಷೆಯಲ್ಲಿ ಬರೆದಿರುವ 'ಭಾಲಾವಲೀಕರ್ ಸಾರಸ್ವತ್ - ಇತಿಹಾಸ ಆಣಿ ಸಂಸ್ಕಾರ್ ವಿಧಿ-ವಿಧಾನ್" ಪುಸ್ತಕವು ಬಂಟ್ವಾಳ ತಾಲೂಕಿನ ಮಂಚಿಯ ಮೋಂತಿಮಾರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಬಿಡುಗಡೆಗೊಂಡಿತು.



ದೇವಸ್ಥಾನದ ಆಡಳಿತ ಮೊಕ್ತೇಸರ ಎಸ್. ಆರ್. ಸತೀಶ್ಚಂದ್ರ ನಾಯಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ಇದು ಒಂದು ವಿಶಿಷ್ಟ ಮೇರು ಕೃತಿಯಾಗಿದ್ದು, ಇದು ಈ ರೀತಿಯ ಮೊದಲ ಪುಸ್ತಕವಾಗಿದ್ದು ಸಮುದಾಯದ ಇತಿಹಾಸ ಮತ್ತು ಆಚರಣೆಗಳ ಬಗ್ಗೆ ತಿಳಿದುಕೊಳ್ಳಲು ಸಹಕಾರಿಯಾಗಿದೆ ಎಂದರು.

ಅಲೋಶಿಯಸ್ ವಿವಿಯ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ| ದಿನೇಶ್ ನಾಯಕ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಇಂತಹ ವಿಶಿಷ್ಟ ಉಪಯುಕ್ತ ಪುಸ್ತಕವನ್ನು ತರುವ ಮೂಲಕ ಲೇಖಕರ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.

ಅಲೋಶಿಯಸ್ ವಿವಿಯ ಹಿಂದಿ ವಿಭಾಗ ಮುಖ್ಯಸ್ಥ ಡಾ|ಮುಕುಂದ್ ಪ್ರಭು ಮಾತನಾಡಿ, ಸಮುದಾಯದ ಸಂಸ್ಕೃತಿ ಮತ್ತು ಸಂಪ್ರದಾಯವು ಹೇಗೆ ಮತ್ತು ಏಕೆ ಮುಖ್ಯ ಎಂಬುದನ್ನು ವಿವರಿಸುವ ಮೂಲಕ ಪುಸ್ತಕದ ಒಳನೋಟಗಳನ್ನು ನೀಡಿದರು.

ಲೇಖಕಿ ಚಂದ್ರಕಲಾ ನಾಯಕ್ ಮಾತನಾಡಿ, ಪುಸ್ತಕವನ್ನು ಬರೆಯಲು ಹೇಗೆ ಸ್ಫೂರ್ತಿ ಪಡೆದರು ಎಂಬುದನ್ನು ಉಲ್ಲೇಖಿಸಿದರು. ಪುಸ್ತಕದ ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ, ತನಗೆ ಬೆಂಬಲ ನೀಡಿದ ಅಲೋಶಿಯಸ್ ವಿವಿಯ ಕುಲಪತಿ ರೆ. ಡಾ| ಪ್ರವೀಣ್ ಮಾರ್ಟಿಸ್, ಅಲೋಶಿಯಸ್ ಪ್ರಕಾಶನದ ನಿರ್ದೇಶಕಿ ಡಾ| ವಿದ್ಯಾ ವಿನುತಾ ಡಿ'ಸೋಜಾ, ಕೊಂಕಣಿ ಭಾಷೆ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಎಂಡಿವಿಕೆ ಶಕ್ತಿನಗರ ಅವರಿಗೂ ಕೃತಜ್ಞತೆ ಸಲ್ಲಿಸಿದರು.

ಗಗನ್ ನಾಯಕ್ ಉಪಸ್ಥಿತರಿದ್ದರು. ಹರಿಪ್ರಸಾದ್ ಮಂಚಿ ಕಾರ್ಯಕ್ರಮ ನಿರೂಪಿಸಿದರು. ನಿಶಾ ಕಾಮತ್ ಸ್ವಾಗತಿಸಿ ಲೇಖಕರನ್ನು ಪರಿಚಯಿಸಿದರು.

Udayavani 13-11-2025

# ಜ.3ರಿಂದ ಅಲೋಶಿಯನ್ ಗೇಮ್ಸ್

ಮಂಗಳೂರು: ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಅಲೋಶಿಯನ್ ಗೇಮ್ಸ್-2026 ಜ.3ರಿಂದ 11ರವರೆಗೆ ನಡೆಯಲಿದೆ. ದಕ್ಷಿಣ ಭಾರತದ ಅತಿದೊಡ್ಡ ಅಂತರ್ ಕಾಲೇಜು ಕ್ರೀಡಾ ಉತ್ಸವ ಇದಾಗಿದ್ದು 20ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಸಂತ ಅಲೋಶಿಯಸ್ ವಿವಿ ಕುಲಪತಿ ಫಾ.ಪ್ರವೀಣ್ ಮಾರ್ಟಿಸ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಆಟಗಳ ಮೂಲಕ ಬಾಂಧವ್ಯ ನಿರ್ಮಿಸುವುದು ಎಂಬ ಟ್ಯಾಗ್‌ಲೈನ್ ಹೊಂದಿರುವ ಉತ್ಸವ ದೇಶದ ಯುವ ಕ್ರೀಡಾಪಟುಗಳನ್ನು ಒಂದುಗೂಡಿಸುವ ಗುರಿ ಹೊಂದಿದೆ. ಕ್ರೀಡಾಕೂಟದಲ್ಲಿ 13 ಸ್ಪರ್ಧಾತ್ಮಕ ಕ್ರೀಡೆಗಳು, ಒಂದು ಮೆಗಾ ಮ್ಯಾರಥಾನ್ ಇರಲಿದೆ ಎಂದರು. ಒಳಾಂಗಣ ಕ್ರೀಡೆಗಳ ವಿಭಾಗದಲ್ಲಿ ಚೆಸ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಸಮರ ಕಲೆಗಳು, ಪವರ್‌ಲಿಫ್ಟಿಂಗ್, ಹೊರಾಂಗಣ ಕ್ರೀಡಾ ವಿಭಾಗದಲ್ಲಿ ಫುಟ್‌ಬಾಲ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಥ್ರೋಬಾಲ್, ಬಾಕ್ಸ್ ಕ್ರಿಕೆಟ್, ಗ್ರೌಂಡ್ ಕ್ರಿಕೆಟ್, ಅಥ್ಲೆಟಿಕ್, ಈಜು ಸ್ಪರ್ಧೆ ನಡೆಯಲಿದೆ. ಜ.4ರಂದು 10 ಕಿ.ಮೀ., 5 ಕಿ.ಮೀ. ಮತ್ತು 3 ಕಿ.ಮೀ.ಮ್ಯಾರಥಾನ್ ಓಟ ನಡೆಯಲಿದೆ. ಭಾಗವಹಿಸುವವರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಬಹುದು ಎಂದರು. ಸಂಸ್ಥೆಯ ದೈಹಿಕ ಶಿಕ್ಷಣ ನಿರ್ದೇಶಕರಾದ ಅರುಣ್ ಎಂ.ಡಿಸೋಜ, ನಿತಿಶಾ ರಾಡ್ರಿಗಸ್, ಅಸಿತ್ ಕುಲಕರ್ಣಿ, ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ಇದ್ದರು.

Samyukta Karnataka 13-11-2025

# ಅಲೋಶಿಯನ್ ಗೇಮ್ಸ್ ಜ.3ರಿಂದ

ಮಂಗಳೂರು: ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಕ್ರೀಡಾಪಟು, ಮತ್ತು ಚಾಂಪಿಯನ್ ಗಳನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಅಲೋಶಿಯನ್

ಗೇಮ್ಸ್–2026 ಜ.3 ರಿಂದ 11ರವರೆಗೆ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಸಂತ ಅಲೋಶಿಯಸ್ ವಿ.ವಿ. ಕುಲಪತಿ ವಂ. ಫಾ. ಪ್ರವೀಣ್ ಮಾರ್ಟಿಸ್ ಮಾತನಾಡಿ, ದಕ್ಷಿಣ ಭಾರತದ ಅತಿದೊಡ್ಡ ಅಂತರ್ ಕಾಲೇಜು ಕ್ರೀಡಾ ಉತ್ಸವಗಳಲ್ಲಿ ಇದಾಗಿದ್ದು, ಸುಮಾರು 20,000 ಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಈ ಉತ್ಸವವು ರಾಷ್ಟ್ರಾದ್ಯಂತದ ಯುವ ಕ್ರೀಡಾಪಟುಗಳನ್ನು, ಕ್ರೀಡಾ ಪ್ರದರ್ಶನದಲ್ಲಿ ಒಂದುಗೂಡಿಸುವ ಗುರಿ ಹೊಂದಿದೆ. ಕ್ರೀಡಾಕೂಟದಲ್ಲಿ 13 ಸ್ಪರ್ಧಾತ್ಮಕ ಕ್ರೀಡೆಗಳು ಮತ್ತು ಒಂದು ಮೆಗಾ ಮ್ಯಾರಥಾನ್ ಇರಲಿದೆ ಎಂದು ತಿಳಿಸಿದರು.

ಒಳಾಂಗಣ ಕ್ರೀಡೆಗಳ ವಿಭಾಗದಲ್ಲಿ ಚೆಸ್, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್, ಸಮರ ಕಲೆಗಳು, ಪವರ್ ಲಿಫ್ಟಿಂಗ್, ಹೊರಾಂಗಣ ಕ್ರೀಡಾ ವಿಭಾಗದಲ್ಲಿ ಫುಟ್ಬಾಲ್, ವಾಲಿಬಾಲ್, ಬಾಸ್ಕೆಟ್ಬಾಲ್, ಥ್ರೋಬಾಲ್, ಬಾಕ್ಸ್ ಕ್ರಿಕೆಟ್, ಗ್ರೌಂಡ್ ಕ್ರಿಕೆಟ್, ಅತ್ಲೆಟಿಕ್, ಈಜು ಸ್ಪರ್ಧೆ ನಡೆಯಲಿದೆ. ಜ.4 ರಂದು ಮ್ಯಾರಥಾನ್ ನಡೆಯಲಿದ್ದು, 10 ಕಿ.ಮೀ., 5 ಕಿ.ಮೀ. ಮತ್ತು 3 ಕಿ.ಮೀ. ಓಟ ನಡೆಯಲಿದೆ.

ಭಾಗವಹಿಸುವವರು hppp:// agÀhÄlysfakdakcs.ZÀlk ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಮಾಡಬಹುದು ಎಂದು ತಿಳಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಅರುಣ್ ಎಂ. ಡಿಸೋಜಾ, ನಿತಿಶಾ ರಾಡ್ರಿಗಸ್, ಅಸಿತ್ ಕುಲಕರ್ಣಿ, ಚಂದ್ರಕಲಾ ಉಪಸ್ಥಿತರಿದ್ದರು.

*Hosadigantha 13-11-2025*

## ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಆಯೋಜನೆ

# ಜ.3ರಿಂದ ಅಲೋಸಿಶಿಯನ್ ಗೇಮ್ಸ್

**ಮಂಗಳೂರು:** ಕ್ರೀಡಾಪಟುಗಳು, ಉತ್ಸಾಹಿಗಳು ಮತ್ತು ಚಾಂಪಿಯನ್‌ಗಳನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಅಲೋಸಿಶಿಯನ್ ಗೇಮ್ಸ್-2026 ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಜ.3 ರಿಂದ 11ರವರೆಗೆ ನಡೆಯಲಿದೆ.

ದಕ್ಷಿಣ ಭಾರತದ ಅತಿದೊಡ್ಡ ಅಂತರ್ ಕಾಲೇಜು ಕ್ರೀಡಾ ಉತ್ಸವ ಇದಾಗಿದ್ದು, ಸುಮಾರು 20,000 ಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. 'ಆಟಗಳ ಮೂಲಕ ಬಾಂಧವ್ಯಗಳನ್ನು ನಿರ್ಮಿಸುವುದು' ಎಂಬ ಟ್ಯಾಗ್‌ಲೈನ್ ಹೊಂದಿರುವ ಈ ಉತ್ಸವವು ರಾಷ್ಟ್ರದಾದ್ಯಂತದ ಯುವ ಕ್ರೀಡಾಪಟುಗಳನ್ನು ಕ್ರೀಡಾ ಪ್ರದರ್ಶನದಲ್ಲಿ ಒಂದುಗೂಡಿಸುವ ಗುರಿಯನ್ನು ಹೊಂದಿದೆ. ಕ್ರೀಡಾಕೂಟದಲ್ಲಿ 13 ಸ್ಪರ್ಧಾತ್ಮಕ ಕ್ರೀಡೆಗಳು ಮತ್ತು ಒಂದು ಮೆಗಾ ಮಾರಥಾನ್ ಇರಲಿದೆ ಎಂದು ವಿವಿ ಕುಲಪತಿ ವಂ. ಫಾ. ಪ್ರವೀಣ್ ಮಾರ್ಟಿಸ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

- ದಕ್ಷಿಣ ಭಾರತದ ಅತಿದೊಡ್ಡ ಅಂತರ್ ಕಾಲೇಜು ಕ್ರೀಡಾ ಉತ್ಸವ
- 20,000 ಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ
- 13 ಸ್ಪರ್ಧಾತ್ಮಕ ಕ್ರೀಡೆಗಳು ಮತ್ತು ಒಂದು ಮೆಗಾ ಮಾರಥಾನ್

ಒಳಾಂಗಣ ಕ್ರೀಡೆಗಳ ವಿಭಾಗದಲ್ಲಿ ಚೆಸ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಸಮರ ಕಲೆಗಳು, ಪವರ್‌ಲಿಫ್ಟಿಂಗ್, ಹೊರಾಂಗಣ ಕ್ರೀಡಾ ವಿಭಾಗದಲ್ಲಿ ಫುಟ್‌ಬಾಲ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಥ್ರೋಬಾಲ್, ಬಾಕ್ಸ್ ಕ್ರಿಕೆಟ್, ಗ್ರೌಂಡ್ ಕ್ರಿಕೆಟ್, ಅಥ್ಲೆಟಿಕ್, ಈಜು ಸ್ಪರ್ಧೆ ನಡೆಯಲಿದೆ. ಜ.4 ರಂದು ಮ್ಯಾರಥಾನ್ ನಡೆಯಲಿದ್ದು, 10 ಕಿ.ಮೀ., 5 ಕಿ.ಮೀ. ಮತ್ತು 3 ಕಿ.ಮೀ. ಓಟ ನಡೆಯಲಿದೆ. ಭಾಗವಹಿಸುವವರು http://aloysiangames.com ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಮಾಡಬಹುದು ಎಂದರು. ದೈಹಿಕ ಶಿಕ್ಷಣ ನಿರ್ದೇಶಕರಾದಅರುಣ್ ಎಂ. ಡಿಸೋಜಾ, ನಿತಿಶಾ ರಾಡ್ರಿಗಸ್, ಅಸಿತ್ ಕುಲಕರ್ಣಿ, ಚಂದ್ರಕಲಾ ಉಪಸ್ಥಿತರಿದ್ದರು.

*Prajavani 13-11-2025*

# ಅಲೋಶಿಯನ್ ಕ್ರೀಡಾಕೂಟ ಜನವರಿಯಲ್ಲಿ

ಮಂಗಳೂರು: ನಗರದ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಆಯೋಜಿಸಿರುವ ಅಲೋಶಿಯನ್ ಕ್ರೀಡಾಕೂಟ ಮುಂದಿನ ವರ್ಷ ಜನವರಿ 3ರಿಂದ 11ರ ವರೆಗೆ ನಡೆಯಲಿದೆ ಎಂದು ಕುಲಪತಿ ಫಾದರ್ ಪ್ರವೀಣ್ ಮಾರ್ಟಿಸ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಚೆಸ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಸಮರ ಕಲೆ, ಪವರ್ ಲಿಫ್ಟಿಂಗ್, ಫುಟ್‌ಬಾಲ್, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್, ಥ್ರೋಬಾಲ್, ಕ್ರಿಕೆಟ್, ಅಥ್ಲೆಟಿಕ್ಸ್, ಈಜು, 10ಕೆ, 5ಕೆ ಮತ್ತು 3ಕೆ ಓಟದ ಸ್ಪರ್ಧೆ ಇರುತ್ತದೆ ಎಂದು ಅವರು ತಿಳಿಸಿದರು.

ಅರುಣ್ ಡಿಸೋಜ, ನಿತೀಶ ರಾಡ್ರಿಗಸ್ ಮತ್ತು ಚಂದ್ರಕಲಾ ಪಾಲ್ಗೊಂಡಿದ್ದರು.

*Vijayakarnataka 13-10-2025*

# ಜ.3ರಿಂದ ಅಂತರ್ ಕಾಲೇಜು ಕ್ರೀಡಾ ಉತ್ಸವ

■ **ವಿಕ ಸುದ್ದಿಲೋಕ** ಮಂಗಳೂರು

ಸಂತ ಆಲೋಶಿಯಸ್ ಪರಿಗಣಿತ ವಿವಿ ವತಿಯಿಂದ ಅಲೋಶಿಯನ್ ಗೇಮ್ಸ್-2026 ಎಂಬ ದಕ್ಷಿಣ ಭಾರತದ ಅತೀ ದೊಡ್ಡ ಅಂತರ ಕಾಲೇಜು ಕ್ರೀಡಾ ಉತ್ಸವ ಜ.3ರಿಂದ 11ರವರೆಗೆ ನಡೆಯಲಿದೆ.

ಕ್ರೀಡಾಪಟುಗಳು, ಉತ್ಸಾಹಿಗಳು ಮತ್ತು ಚಾಂಪಿಯನ್‌ಗಳನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಕ್ರೀಡಾ ಉತ್ಸವ ಆಯೋಜಿಸಲಾಗಿದೆ ಎಂದು ವಿವಿ ಕುಲಪತಿ ಫಾದರ್ ಪ್ರವೀಣ್ ಮಾರ್ಟಿಸ್ ಸುದ್ದಿಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

'ಆಟಗಳ ಮೂಲಕ ಬಾಂಧವ್ಯಗಳನ್ನು ನಿರ್ಮಿಸುವುದು' ಎಂಬ ಧ್ಯೇಯ ವಾಕ್ಯದಡಿ ನಡೆಯುವ ಕ್ರೀಡಾ ಉತ್ಸವವು ರಾಷ್ಟ್ರದ ಯುವ ಕ್ರೀಡಾಪಟುಗಳನ್ನು ಕ್ರೀಡಾ ಪ್ರದರ್ಶನದಲ್ಲಿ ಒಂದುಗೂಡಿಸುವ ಗುರಿ ಹೊಂದಿದ್ದು, ಸುಮಾರು 20 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. 13 ಸ್ಪರ್ಧಾತ್ಮಕ ಕ್ರೀಡೆಗಳು ಮತ್ತು ಮೆಗಾ ಮ್ಯಾರಥಾನ್ ನಡೆಯಲಿದೆ ಎಂದರು.

ಒಳಾಂಗಣ ಕ್ರೀಡೆಗಳ ವಿಭಾಗದಲ್ಲಿ ಚೆಸ್, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್, ಸಮರ ಕಲೆಗಳು, ಪವರ್ ಲಿಫ್ಟಿಂಗ್, ಹೊರಾಂಗಣ ಕ್ರೀಡಾ ವಿಭಾಗದಲ್ಲಿ ಫುಟ್ ಬಾಲ್, ವಾಲಿಬಾಲ್, ಬಾಸ್ಕೆಟ್ ಬಾಲ್, ಥ್ರೋಬಾಲ್, ಬಾಕ್ಸ್ ಕ್ರಿಕೆಟ್, ಗ್ರೌಂಡ್ ಕ್ರಿಕೆಟ್, ಅತ್ಲೆಟಿಕ್, ಈಜು ಸ್ಪರ್ಧೆ ನಡೆಯಲಿದೆ. ಜ.4ರಂದು ಮ್ಯಾರಥಾನ್ ನಡೆಯಲಿದ್ದು, 10 ಕಿಮೀ, ಐದು ಕಿಮೀ ಮತ್ತು ಮೂರು ಕಿಮೀ ಓಟ ನಡೆಯಲಿದೆ.

ಭಾಗವಹಿಸುವವರು http://aloysiangames.com ಆನ್‌ಲೈನ್‌ನಲ್ಲಿ ನೋಂದಣಿ ಮಾಡಬಹುದು ಎಂದು ಅವರು ವಿವರಿಸಿದರು.

ದೈಹಿಕ ಶಿಕ್ಷಣ ನಿರ್ದೇಶಕರಾದ ಅರುಣ್ ಎಂ. ಡಿಸೋಜ, ನಿಶಿತಾ ರಾಡ್ರಿಗಸ್, ಅಸಿತ್ ಕುಲಕರ್ಣಿ, ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

*Varthabharathi 13-11-2025*

# ಜ.3-11: 'ಅಲೋಶಿಯನ್ ಗೇಮ್ಸ್-2026'

ಮಂಗಳೂರು, ನ.12: ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಕ್ರೀಡಾಪಟುಗಳು, ಉತ್ಸಾಹಿಗಳು ಮತ್ತು ಚಾಂಪಿಯನ್‌ಗಳನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಜ.3ರಿಂದ 11ರವರೆಗೆ ಅಲೋಶಿಯನ್ ಗೇಮ್ಸ್-2026 ನಡೆಯಲಿದೆ.

ನಗರದ ಪತ್ರಿಕಾಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಸಂತ ಅಲೋಶಿಯಸ್ ವಿವಿಯ ಕುಲಪತಿ ವಂ.ಫಾ.ಪ್ರವೀಣ್ ಮಾರ್ಟಿಸ್ ಈ ಬಗ್ಗೆ ವಿವರ ನೀಡಿದರು.

ಇದು ದಕ್ಷಿಣ ಭಾರತದ ಅತೀ ದೊಡ್ಡ ಅಂತರ್ ಕಾಲೇಜು ಕ್ರೀಡಾ ಉತ್ಸವಗಳಲ್ಲಿ ಒಂದಾಗಿದ್ದು, ಸುಮಾರು 20,000ಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. 'ಆಟಗಳ ಮೂಲಕ ಬಾಂಧವ್ಯ' ಎಂಬ ಟ್ಯಾಗ್‌ಲೈನ್ ಹೊಂದಿರುವ ಈ ಉತ್ಸವವು ರಾಷ್ಟ್ರದಾದ್ಯಂತದ ಯುವ ಕ್ರೀಡಾಪಟುಗಳನ್ನು ಕ್ರೀಡಾ ಪ್ರದರ್ಶನದಲ್ಲಿ ಒಂದುಗೂಡಿಸುವ ಗುರಿ ಹೊಂದಿದೆ. ಕ್ರೀಡಾಕೂಟದಲ್ಲಿ 13 ಸ್ಪರ್ಧಾತ್ಮಕ ಕ್ರೀಡೆಗಳು ಮತ್ತು ಒಂದು ಮೆಗಾ ಮ್ಯಾರಥಾನ್ ಇರಲಿದೆ ಎಂದು ತಿಳಿಸಿದರು.

ಒಳಾಂಗಣ ಕ್ರೀಡೆಗಳ ವಿಭಾಗದಲ್ಲಿ ಚೆಸ್, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್, ಸಮರ ಕಲೆಗಳು, ಪವರ್ ಲಿಫ್ಟಿಂಗ್, ಹೊರಾಂಗಣ ಕ್ರೀಡಾ ವಿಭಾಗದಲ್ಲಿ ಫುಟ್‌ಬಾಲ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಥ್ರೋಬಾಲ್, ಬಾಕ್ಸ್ ಕ್ರಿಕೆಟ್, ಗ್ರೌಂಡ್ ಕ್ರಿಕೆಟ್, ಅತ್ಲೆಟಿಕ್, ಈಜು ಸ್ಪರ್ಧೆ ನಡೆಯಲಿದೆ. ಜ.4ರಂದು ಮ್ಯಾರಥಾನ್ ನಡೆಯಲಿದ್ದು, 10 ಕಿ.ಮೀ., 5 ಕಿ.ಮೀ. ಮತ್ತು 3 ಕಿ.ಮೀ. ಓಟ ನಡೆಯಲಿದೆ. ಭಾಗವಹಿಸುವವರು http://aloysian-games.com ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಮಾಡಬಹುದು ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಅರುಣ್ ಎಂ. ಡಿಸೋಜ, ನಿಶಿತಾ ರಾಡ್ರಿಗಸ್, ಅಸಿತ್ ಕುಲಕರ್ಣಿ, ಚಂದ್ರಕಲಾ ಉಪಸ್ಥಿತರಿದ್ದರು.



ESTD : 1880

*Indian Express 14-11-2025*



St Aloysius Vice-chancellor Dr Praveen Martis speaks to the media in Mangaluru.

# Aloysian Games 2026 to draw over 20K athletes

EXPRESS NEWS SERVICE
@Mangaluru

ST Aloysius (Deemed to be University) has announced that the Aloysian Games 2026 will be held from January 3 to 11 on its campus. The announcement was made by Vice-Chancellor Dr. Praveen Martis.

He also said,The grand sporting event will feature 13 competitive sports and a mega marathon, bringing together over 20,000 participants from across the country. Indoor events include chess, table tennis, badminton, martial arts, and power lifting, while outdoor events comprise football, volleyball, basketball, box cricket, ground cricket, athletics, and swimming.

The Mega Marathon, scheduled for January 4, will have three categories 10K, 5K, and 3K. Registration fees start at Rs 200 for individual events, Rs 1,000 for team events and Rs 350 for the marathon. Registrations are now open, he added.

Dr. Martis noted that the Aloysian Games 2026 will be one of the largest intercollegiate sports fests in India, aiming to celebrate athleticism, teamwork, and sportsmanship by uniting young athletes from diverse institutions. The university will also commemorate its foundation day on January 12, marking the beginning of its 150th-year celebrations.

*Deccan Herald 14-11-2025*

# Aloysian Games 2026 in January next year

MANGALURU, DHNS: St Aloysius Deemed-to-be-University will organise 'Aloysian Games 2026' from January 3 to 11.

University VC Fr Pravin Martis told mediapersons at the Patrika Bhavan that 13 sports events and a marathon would be a part of the nine-day event, being held under the theme 'Building Bonds through Games'.

The events planned include, chess, table tennis, badminton, martial arts, powerlifting, football, volleyball, basketball, throwball, box cricket, ground cricket, athletics, swimming and a marathon (10K, 5K and 3K).

The marathon will be held on January 4, with the institution premises as the starting and ending points. Interested can register at https://aloysiangames.com

Udayavani 16-11-2025

# ಅಲೋಶಿಯಸ್ ವಿವಿ: ಜ. 3- 11ರವರೆಗೆ ಅಂತರ್ ಕಾಲೇಜು ಕ್ರೀಡೋತ್ಸವ



**ಉರ್ವ, ನ. 15:** ಕ್ರೀಡಾಪಟುಗಳು, ಉತ್ಸಾಹಿಗಳು ಮತ್ತು ಚಾಂಪಿಯನ್‌ಗಳನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಅಲೋಶಿಯನ್ ಗೇಮ್ಸ್-2026 ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಜ. 3ರಿಂದ 11ರ ವರೆಗೆ ನಡೆಯಲಿದೆ.

ನಗರದ ಪತ್ರಿಕಾಭವನದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿ.ವಿ. ಕುಲಪತಿ ವಂ| ಪ್ರವೀಣ್ ಮಾರ್ಟಿಸ್ ಮಾತನಾಡಿ, ದಕ್ಷಿಣ ಭಾರತದ ಅತಿದೊಡ್ಡ ಅಂತರ್ ಕಾಲೇಜು ಕ್ರೀಡಾ ಉತ್ಸವಗಳಲ್ಲಿ ಇದಾಗಿದ್ದು, ಸುಮಾರು 20,000ಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.

'ಆಟಗಳ ಮೂಲಕ ಬಾಂಧವ್ಯಗಳನ್ನು ನಿರ್ಮಿಸುವುದು' ಎಂಬ ಟ್ಯಾಗ್‌ಲೈನ್ ಮೂಲಕ ಈ ಉತ್ಸವವು ರಾಷ್ಟ್ರದಾದ್ಯಂತದ ಯುವ ಕ್ರೀಡಾಪಟುಗಳನ್ನು ಕ್ರೀಡಾ ಪ್ರದರ್ಶನದಲ್ಲಿ ಒಂದುಗೂಡಿಸುವ ಗುರಿಯನ್ನು ಹೊಂದಿದೆ. ಕ್ರೀಡಾಕೂಟದಲ್ಲಿ 13 ಸ್ಪರ್ಧಾತ್ಮಕ ಕ್ರೀಡೆಗಳು, ಒಂದು ಮೆಗಾ ಮಾರಥಾನ್ ಇರಲಿದೆ ಎಂದು ತಿಳಿಸಿದರು.

ಒಳಾಂಗಣ ಕ್ರೀಡೆಗಳ ವಿಭಾಗದಲ್ಲಿ ಚೆಸ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಸಮರ ಕಲೆಗಳು, ಪವರ್‌ಲಿಫ್ಟಿಂಗ್, ಹೊರಾಂಗಣ ಕ್ರೀಡಾ ವಿಭಾಗದಲ್ಲಿ ಫುಟ್‌ಬಾಲ್, ವಾಲಿಬಾಲ್, ಬಾಸ್ಕೆಟ್ ಬಾಲ್, ತ್ರೋಬಾಲ್, ಬಾಕ್ಸ್ ಕ್ರಿಕೆಟ್, ಗ್ರೌಂಡ್ ಕ್ರಿಕೆಟ್, ಅಥ್ಲೆಟಿಕ್, ಈಜು ಸ್ಪರ್ಧೆ ನಡೆಯಲಿದೆ.

ಜ.4 ರಂದು ಮ್ಯಾರಥಾನ್ ನಡೆಯಲಿದ್ದು, 10 ಕಿ.ಮೀ., 5 ಕಿ.ಮೀ. ಮತ್ತು 3 ಕಿ.ಮೀ. ಓಟ ನಡೆಯಲಿದೆ. ಭಾಗವಹಿಸುವವರು http://aloysiangames.com ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಮಾಡಬಹುದು ಎಂದು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಅರುಣ್ ಎಂ. ಡಿ'ಸೋಜಾ, ನಿತಿಶಾ ರಾಡ್ರಿಗಸ್, ಅಸಿತ್ ಕುಲಕರ್ಣಿ, ಚಂದ್ರಕಲಾ ಇದ್ದರು.

*Indian Express 16-11-2025*

THEATRE IN HIS VEINS, DUTY IN HIS HEART, VIJAYA'S INSPIRING JOURNEY OF PASSION AND PERSEVERANCE

# IT'S ALL A PLAY

**ABHIJITH N KOLPE** @ Mangaluru

At first glance, Vijaya may appear to be just another watchman at the gates of St Aloysius (Deemed to be University). But behind that uniform is a man of unshakeable passion for theatre. Hailing from Hanekal near Bengaluru, Vijaya's tryst with theatre began when he was nine years old. Growing up in a modest household, he had few material possessions but an imagination that knew no bounds.

"It all started when my mother noticed my interest in drama," recalls Vijaya. "There was a drama practice happening nearby, and she requested them to let me take part."

His mother's encouragement turned out to be the spark that ignited a lifelong passion. Vijaya was offered the role of Shikandi in a mythological play. Though it was a minor part, it gave him the confidence to pursue acting seriously.

Within two years, he was entrusted with more prominent roles playing characters like Vidura, Karna, Arjuna, and Dharmaraya. Each performance polished his skills. "I loved stepping into different characters and living their emotions," he says.

At 16, Vijaya won an award at Kala Kshetra in Bengaluru for his portrayal of Shakuni in a mythological drama. This was not a role he had prepared for. His drama teacher, Jayaram, had offered him the part at the last minute when the actor who was to play Shakuni fell ill. It was a replacement role, but I put my heart and soul into it, Vijaya recalls.

Not long after that performance, Jayaram passed away. The loss of his teacher and the dissolution of the team marked a turning point in his journey. Vijaya lost his parents when he was 17 and he moved to Mangaluru.

He worked as a hotel supplier. He had little opportunity to pursue his artistic goals. "Even while working long hours, I would often recite dialogues in my mind," he admits. "The love for theatre never faded."

Seven years ago, Vijaya joined St. Aloysius as a watchman. His passion for drama, however, remained alive. Whenever he saw students rehearsing for plays or college events, he reminisced of his days on the stage.

Two years ago, Vijaya mentioned his background in theatre to lecturer Christy. During an event organized by the Ranga Adhyayana Kendra at the college, Vijaya was invited as a guest. What followed left the audience spellbound.



Vijaya with his wife, Kushala, and their daughter, Trisha. | EXPRESS

Vijaya performed a 10-minute monologue as Shakuni, the very role that had earned him acclaim years ago. With minimal preparation, he flawlessly delivered his dialogues, captivating the students and faculty alike.

"I didn't have a script," Vijaya says. "I remembered the dialogues from my younger days. During my free time at work, I often practice a few lines just to keep the passion alive. Performing again after so many years was like traveling back in time."

The applause he received that day reaffirmed his identity as an artiste. "St Aloysius is my second home," he says. "I've earned not just respect here, but genuine love. Even after students graduate, many still call or message me to ask about my health. That affection means everything to me."

Vijaya is married to, Kushala, and their daughter, Trisha, is currently doing her pre-university at St. Aloysius.

Vice-Chancellor of St Aloysius (Deemed to be University), Dr. Praveen Martis, praised Vijaya's sincerity and passion. "During the college event where he performed, parents, teachers, and students were amazed by his talent. He is a passionate man," he told TNIE.

Speaking to TNIE one of the staff members added, "we don't see Vijaya as just a watchman. He is one of us, and always ready to help. Outgoing students often make sure to take a group photo with him before leaving the college. That shows how much he is loved here."

Christopher D'Souza, Director, Ranga Adhyana Kendra, St Aloysius (Deemed to be University), says, "We regularly practice drama late in the evening. Vijaya has built a rapport with everyone, often helping us during rehearsals.

"One day, he mentioned that he came from a traditional drama troupe. We often saw him practicing dialogues while walking around, and were amazed by his ability to recall lines even after 35 years. We later invited him as a guest to our student theatre festival and encouraged him to wear a costume again. There were tears in his eyes as he stepped on to the stage. His two-minute performance left the entire audience awestruck."

For Vijaya, every day at the university gate is more than a job. It's another scene in the larger play of life, one where kindness, humility, and love for art take center stage.



*Udayavani 21-11-2025*

# ಪ್ರಾಧ್ಯಾಪಿಕೆ ಸುಚಿತ್ರಾ ಅವರಿಗೆ ಪಿಎಚ್‌.ಡಿ.



**ಮಹಾನಗರ, ನ. 20:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ವಾಣಿಜ್ಯ, ಹಣಕಾಸು ಮತ್ತು ಲೆಕ್ಕಶಾಸ್ತ್ರ ಶಾಲೆಯ ಸಹಾಯಕ ಪ್ರಾಧ್ಯಾಪಿಕೆ ಸುಚಿತ್ರಾ ಅವರ ಸುಸ್ಥಿರ ಮಹಿಳಾ ಉದ್ಯಮಿಗಳು: ಕರಾವಳಿ ಕರ್ನಾಟಕದಲ್ಲಿ ಒಂದು ಅಧ್ಯಯನ ಎಂಬ ಮಹಾಪ್ರಬಂಧಕ್ಕಾಗಿ ಶ್ರೀನಿವಾಸ ವಿಶ್ವವಿದ್ಯಾಲಯವು ಪಿಎಚ್‌.ಡಿ. ನೀಡಿ ಗೌರವಿಸಿದೆ.

ಅವರು ಮಂಗಳೂರು ಶ್ರೀನಿವಾಸ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆಂಡ್ ಕಾಮರ್ಸ್‌ನ ಸಂಶೋಧನ ಪ್ರಾಧ್ಯಾಪಕ ಡಾ| ರಮೇಶ್ ಎ. ಪೈ ಅವರ ಮಾರ್ಗದರ್ಶನದಲ್ಲಿ ಪ್ರಬಂಧವನ್ನು ಮಂಡಿಸಿದ್ದರು. ಸುಚಿತ್ರಾ ಅವರು ಮಂಗಳೂರು ಕುತ್ತಾರಿನ ಸುಧಾಕರ್, ಸುನಂದಾ ಅವರ ಪುತ್ರಿ.

Samyuktha Karnataka 21-11-2025

# ಫಾ.ಸ್ವೀಬರ್ಟ್ ಡಿ'ಸಿಲ್ವಾ ನಿಧನ

ಮಂಗಳೂರು: ಸಂತ ಅಲೋಶಿಯಸ್ ಕಾಲೇಜಿನ ಮಾಜಿ ಪ್ರಾಂಶುಪಾಲ ಫಾ. ಸ್ವೀಬರ್ಟ್ ಡಿ'ಸಿಲ್ವಾ (68) ಹೃದಯಾಘಾತದಿಂದ ನಿಧನರಾದರು..



ಡಿ'ಸಿಲ್ವಾ ಅವರು 2007 ರಿಂದ 2017 ರವರೆಗೆ ಸಂತ ಅಲೋಶಿಯಸ್ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ಸಂಸ್ಥೆಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿದ್ದಾರೆ.


ಫಾದರ್ ಸ್ವೀಬರ್ಟ್ ಡಿ'ಸಿಲ್ವಾ ಅವರು ಬೆಂಗಳೂರಿನ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಮಾಜಿ ರೆಕ್ಟರ್ ಮತ್ತು ಪ್ರೊ-ಕುಲಪತಿಯಾಗಿದ್ದರು.

Udayavani 22-11-2025

**ಕೊಡಿಯಾಲಬೈಲು:** ಕೆನರಾ ಕಾಲೇಜಿನ ರ್ಯಾಗಿಂಗ್ ವಿರೋಧಿ ಘಟಕದ ವತಿಯಿಂದ ರ್ಯಾಗಿಂಗ್ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಸಂತ ಅಲೋಶಿಯಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಐಟಿ ಕಾಲೇಜಿನ ಸ್ನಾತಕೋತ್ತರ ವ್ಯವಹಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಸ್ಟೀವನ್ ಡಿ'ಸೋಜಾ ಎನ್. ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಘಟಕದ ಸಂಚಾಲಕಿಯರಾದ ಉಷಾ ನಾಯಕ್, ಶೈಲಜಾ ಕುಮಾರಿ ಕಾರ್ಯಕ್ರಮ ಸಂಯೋಜಿಸಿದರು.



*The Hindu* 22-11-2025




Praveen Martis, Vice-Chancellor of St. Aloysius (Deemed to be University), and Sridhar Aranala, vice-president (Sales & Distribution), The Hindu Group at the MoU signing on St. Aloysius College campus in Mangaluru on Friday. H.S. MANJUNATH

**The Hindu Bureau**
MANGALURU

St. Aloysius (Deemed to be University), Mangaluru, and The Hindu Group signed a Memorandum of Understanding (MoU) on Friday to launch The Hindu Future India Club (FIC) on its campus.

The Hindu FIC is a signature educative program that is a key component of The Hindu Group's LAB (Learning & Bridging) initiative.

The MoU was signed and exchanged by Praveen Martis, Vice-Chancellor of St. Aloysius (Deemed to be University), and Sridhar Aranala, vice-president (Sales & Distribution) of The Hindu Group.

Through curated programs like interactive workshops, guest lectures, and competitions, the FIC aims to bridge the gap between theoretical classroom learning and real-world professional readiness. The programme's core benefit is to cultivate enhanced employability by focusing on the development of critical skills such as communication, leadership, teamwork, and analytical thinking.

Students gain a deeper understanding of current affairs and world perspectives through access to quality news and content resources from The Hindu Group, ultimately nurturing well-rounded individuals prepared to contribute meaningfully to society.

"This partnership re-establishes our commitment to the students of the institution as well as to the society, and both St. Aloysius and The Hindu Group are premier historical institutions which have come together to establish this association," the V-C said.

Udayavani 24-11-2025

# ಅಲೋಶಿಯಸ್ ವಿವಿಯಲ್ಲಿ ಅನ್‌ಬಾಕ್ಸಿಂಗ್ ಎಐ ಕಾರ್ಯಾಗಾರ



**ಬಾವುಟಗುಡ್ಡೆ ನ. 23:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಎಂಜಿನಿಯರಿಂಗ್ ವಿಭಾಗದ ವತಿಯಿಂದ ಇತ್ತೀಚೆಗೆ ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಸಹಯೋಗದೊಂದಿಗೆ ಅನ್‌ಬಾಕ್ಸಿಂಗ್ ಎಐ ಕಾರ್ಯಾಗಾರವನ್ನು ಎಂಸಿಒಡಿಎಸ್ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗಾಗಿ ನಡೆಯಿತು.

ದಂತ ಶಿಕ್ಷಣ, ಸಂಶೋಧನೆ ಮತ್ತು ಕ್ಲಿನಿಕಲ್ ಅಭ್ಯಾಸದಲ್ಲಿ ಕೃತಕ ಬುದ್ಧಿಮತ್ತೆಯ ಏಕೀಕರಣದ ಮೇಲೆ ಕಾರ್ಯಾಗಾರ ನಡೆಸಲಾಯಿತು.

ಎಂಸಿಒಡಿಎಸ್ ಸಂಯೋಜಕ ಡಾ| ಕಾರ್ತಿಕ್ ಶೆಟ್ಟಿ ಸಹಾಯಕ ಡೀನ್ ಡಾ| ಶ್ರೀಕಾಂತ್ ಮಾತನಾಡಿದರು. ಅಲೋಶಿಯಸ್ ವಿವಿಯ ಪ್ರೊ ವೈಸ್ ಚಾನ್ಸೆಲರ್ ವಂ| ಡಾ| ಮೆಲ್ವಿನ್ ಡಿ.ಕುನ್ಹಾ ಅಧ್ಯಕ್ಷತೆ ವಹಿಸಿದ್ದರು. ಎಸ್.ಒ.ಇ. ಡೀನ್ ಡಾ| ಎಸ್. ರೂಬನ್ ಸಭೆಯನ್ನು ಸ್ವಾಗತಿಸಿ, ಸಹಾಯಕ ಡೀನ್ ಗ್ಲೆನ್ಸನ್ ಟೋನಿ ನಿರೂಪಿಸಿದರು. ಸಂಸ್ಥೆಯ ಇನ್ನೋವೇಶನ್ ಕೌನ್ಸಿಲ್ ಅಧ್ಯಕ್ಷ ಸಿರಾಜ್ ವಂದಿಸಿದರು. ಉದ್ಘಾಟನ ಸಮಾರಂಭದ ಬಳಿಕ ಡಾ| ಎಸ್. ರೂಬನ್, ಟೋನಿ, ಸಿರಾಜ್ ವಿವಿಧ ವಿಷಯದ ಕುರಿತು ಅಧಿವೇಶನವನ್ನು ನಡೆಸಿದರು.

Udayavani 30-11-2025

## ಅಹ್ಮದೀಯ ಮುಸ್ಲಿಂ ಕಮ್ಯುನಿಟಿ ವತಿಯಿಂದ ವಿಚಾರಗೋಷ್ಠಿ

# ರಾಜಕೀಯದಾಟಕ್ಕೆ ವಿದ್ಯಾರ್ಥಿಗಳು ಬಲಿಯಾಗದಿರಿ




**ಹಂಪನಕಟ್ಟೆ ನ. 29:** ಇಂದಿನ ವ್ಯವಸ್ಥೆಯಲ್ಲಿ ರಾಜಕೀಯ ಚದುರಂಗದ ಆಟಕ್ಕೆ ಯುವ ಸಮುದಾಯ ಬಲಿಯಾಗುತ್ತಿದ್ದು ವಿದ್ಯಾರ್ಥಿ ಸಮುದಾಯ ಹಾಗೂ ಯುವಜನತೆ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕಿದೆ. ಶಾಂತಿಗಾಗಿ ಸಹನೆಯಿಂದ ನಡೆದುಕೊಳ್ಳಬೇಕಿದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ| ದಯಾನಂದ ನಾಯ್ಕ್ ಹೇಳಿದರು.

ಅಹ್ಮದೀಯ ಮುಸ್ಲಿಂ ಕಮ್ಯುನಿಟಿ ವತಿಯಿಂದ 'ಜಾಗತಿಕ ಶಾಂತಿ ಸ್ಥಾಪನೆಯಲ್ಲಿ ಶಿಕ್ಷಣದ ಪಾತ್ರ' ಎಂಬ ವಿಷಯದ ಬಗ್ಗೆ ಹಂಪನಕಟ್ಟೆಯ ವಿವಿ ಕಾಲೇಜಿನಲ್ಲಿ ಶನಿವಾರ ನಡೆದ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಹೊಂದಾಣಿಕೆ, ಭ್ರಾತೃತ್ವ ಅತೀ ಅಗತ್ಯ. ವಿದ್ಯೆಯಿಂದ ವಿನಯತೆ ಹಾಗೂ ಸರಳತೆ ರೂಪುಗೊಳ್ಳುತ್ತದೆ. ಭಯವಿಲ್ಲದ ವಾತಾವರಣ ನಿರ್ಮಾಣಕ್ಕೆ ನಮ್ಮತನವನ್ನು ಉಳಿಸಬೇಕು ಎಂದು ಹೇಳಿದರು.

ಪ್ರಾಂಶುಪಾಲ ಗಣಪತಿ ಗೌಡ ಮಾತನಾಡಿ, ಇಂದು ಶಾಂತಿಯ ವಾತಾವರಣಕ್ಕೆ ಬೆದರಿಕೆ ಇದ್ದು ಶಿಕ್ಷಣವನ್ನು ಒತ್ತಡವಿಲ್ಲದೆ ಸ್ವತಂತ್ರ ಮಾಡಬೇಕು. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಹಿತಕ್ಕಾಗಿ ಕಾರ್ಯ ನಿರ್ವಹಿಸಬೇಕು ಎಂದರು.

**ಶಾಂತಿ ಸ್ಥಾಪನೆಗೆ ಶಿಕ್ಷಣ ಪ್ರಮುಖ ಅಸ್ತ್ರ**

ಅಹ್ಮದೀಯ ಮುಸ್ಲಿಂ ಕಮ್ಯುನಿಟಿ ಇಂಟಿಯಾದ ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕ ಶಿರಝ್ ಅಹ್ಮದ್ ಮಾತನಾಡಿ, ಶಾಂತಿ ಸ್ಥಾಪನೆಗೆ ಶಿಕ್ಷಣ ಪ್ರಮುಖ ಅಸ್ತ್ರವಾಗಿದೆ. ಶಿಕ್ಷಣದಿಂದ ವಿದ್ಯಾರ್ಥಿಯ ಹೃದಯ ಹಾಗೂ ಮನಸ್ಸು ಗೆಲ್ಲಬಹುದು. ನೈತಿಕ ಹಾಗೂ ಧಾರ್ಮಿಕ ಶಿಕ್ಷಣ ದಿಂದ ವಿದ್ಯಾರ್ಥಿಯ ಮಾನಸಿಕತೆಯ ಮೇಲೆ ಪರಿಣಾಮ ಬೀರಲಿದೆ. ಅತ್ಯುನ್ನತ ಶಿಕ್ಷಣ ಪಡೆದ ಮುಸ್ಲಿಮರು ಧರ್ಮದ ಹೆಸರಿನಲ್ಲಿ ಇತರರನ್ನು ಹತ್ಯೆ ಮಾಡುತ್ತಿದ್ದು ಇದಕ್ಕೆ ವಿಶ್ವ ಶಾಂತಿಯ ಕುರಿತಾಗಿ ಶಿಕ್ಷಣ ಇಲ್ಲದಿರುವುದೇ ಕಾರಣವಾಗಿದೆ. ಶಾಂತಿ ಸ್ಥಾಪನೆಗೆ ವಿದ್ಯಾರ್ಥಿಗಳನ್ನು ತಯಾರಾಗಿಸಬೇಕು ಎಂದರು.

ಸಂತ ಅಲೋಶಿಯಸ್ ವಿ.ವಿ. ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರತ್, ಕೊಡಗು ವಿವಿ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಸುದರ್ಶನ್ ಕುಮಾರ್ ಎನ್.ಕೆ., ಡಾ| ಎಂ.ವಿ. ಶೆಟ್ಟಿ ಸಂಸ್ಥೆಯ ಪ್ರಾಧ್ಯಾಪಿಕೆ ಪ್ರಜ್ಞಾ ಕೃಷ್ಣನ್, ರೋಶನಿ ನಿಲಯ ಸ್ನಾತಕೋತ್ತರ ವಿಭಾಗದ ಡೀನ್ ಡಾ| ಮೀನ ಜೂಲಿಯೆಟ್ ಮೊಂತೇರೊ ಅವರು ಜಾಗತಿಕ ಶಾಂತಿ ಸ್ಥಾಪನೆಯಲ್ಲಿ ಶಿಕ್ಷಣದ ಪಾತ್ರದ ಬಗ್ಗೆ ಉಪನ್ಯಾಸ ನೀಡಿದರು.

ಲೈಝ್ ಸ್ವಾಗತಿಸಿ, ಅಹ್ಮದೀಯ ಮುಸ್ಲಿಂ ಕಮ್ಯುನಿಟಿ ಮಂಗಳೂರು ಅಧ್ಯಕ್ಷ ಬಿ.ಎಸ್. ಅಬ್ದುಲ್ ರಹೀಮ್ ವಂದಿಸಿದರು. ಸುಹೈಲ್ ನಿರೂಪಿಸಿದರು.

Udayavani 30-11-2025

# ಬಾಪಾಟೆ ಪುತಾಟೆ ನಾಂವಿಂ ಚಿತ್ರ ಬಿಡುಗಡೆ

**ಮಂಗಳೂರು:** ವಿಶನ್ ಕೊಂಕಣಿ ನಿರ್ಮಾಣದ ದಾಯ್ಜಿವರ್ಲ್ಡ್ ಫಿಲ್ಮ್ಸ್ ಬ್ಯಾನರಿನಡಿ ತಯಾರಾದ ಬಹುನಿರೀಕ್ಷಿತ ಕೊಂಕಣಿ ಚಿತ್ರ ಬಾಪಾಟೆ ಪುತಾಟೆ ನಾಂವಿಂ ಶುಕ್ರವಾರ ಮಂಗಳೂರಿನ ಭಾರತ್ ಸಿನೆಮಾಸ್‌ನಲ್ಲಿ ತೆರೆ ಕಂಡಿದೆ. ಯುವ ಸಾಹಿತಿ, ಪತ್ರಕರ್ತ ಸ್ಟ್ಯಾನಿ ಬೇಳ ಬಾಪಾಟೆ ಪುತಾಟೆ ನಾಂವಿಂ ಚಿತ್ರಕ್ಕೆ ಕಥೆ, ಸಂಭಾಷಣೆ ಬರೆದು, ಚಿತ್ರವನ್ನು ನಿರ್ದೇಶಿಸಿದ್ದಾರೆ. ಸಂಜಯ್ ರಾಡ್ರಿಗಸ್ ಹಿನ್ನೆಲೆ ಸಂಗೀತವಿದೆ. ಯುವ ಛಾಯಾಗ್ರಾಹಕ ಜೋಯೆಲ್ ಶಮನ್ ಕ್ಯಾಮರಾ ಚಲಾಯಿಸಿದ್ದಾರೆ. ಉಡುಪಿ, ಪುತ್ತೂರು ಹಾಗೂ ದೇರಳಕಟ್ಟೆಯಲ್ಲಿ ಡಿ. 5ರಂದು ಚಿತ್ರವು ತೆರೆಕಾಣಲಿದೆ ಎಂದು ನಿರ್ಮಾಣ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ

